# ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ

ಸಿ.ಸಿ. ನಂ-682/2020

Cw-5 Pw-4

| | |
|---|---|
| ಹೆಸರು | ದರೇಪ್ಪಾ ತಂದೆ ವೆಂಕಪ್ಪಾ ಕುಂಬಾರ |
| ವಯಸ್ಸು | 38 |
| ಉದ್ಯೋಗ | ಎಚ್ ಸಿ ಬನಹಟ್ಟಿ ಪಿ ಎಸ್ |
| ವಾಸಸ್ಥಳ | ಬನಹಟ್ಟಿ |

ದಿನಾಂಕಃ 17-06-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿ ರವರಿಂದ-**

ದಿನಾಂಕಃ 2013 ರಿಂದ 2021 ರವರೆಗೆ ನಾನು ಸಾವಳಗಿ ಠಾಣೆಯಲ್ಲಿ ಸಿ ಪಿ ಸಿ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 02-04-2020 ರಂದು ಸಂಜೆ 07-00 ಸುಮಾರಿಗೆ ಗೊಠೆ ಗ್ರಾಮದಲ್ಲಿ ನಾನು ಚಾಸಾ 1 , 4, ಮತ್ತು ಚಾಸಾ 6 ರವರೊಂದಿಗೆ ಗಸ್ತು ಮಾಡುತ್ತಿರುವಾಗ ಗೊಠೆ ಗ್ರಾಮದ ಗ್ರಾಮ ಪಂಚಾಯತಿ ಹತ್ತಿರ ಕುಮಟೆ ರಸ್ತೆಯ ಮೇಲೆ ಒಬ್ಬ ವಕ್ತಿ 2 ಲೀಟರ್ ನ 2 ಬಾಟಲಿಗಳಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿದ್ದು ಕೂಡಲೇ ಚಾಸಾ 4 ರವರ ಬಳಿಯಿಂದ ಇಬ್ಬರೂ ಪಂಚರನ್ನು ಬರಮಾಡಿಕೊಂಡು ಬರಲು ತಿಳಿಸಿದ್ದು ಅವರು ಚಾಸಾ 2 ಮತ್ತು ಚಾಸಾ 3 ರವರನ್ನು ಹಾಜರಪಡಸಿದ್ದು ಅವರಿಗೆ ಮಾಹಿತಿಯನ್ನು ತಿಳಿಸಿ ಅವರು ಪಂಚರಾಗಿ ಸಹಕರಿಸಲು ಒಪ್ಪಿಕೊಂಡಿ ಮೇರೆಗೆ ಮಾಹಿತಿ ಬಂದ ಸ್ಥಳಕ್ಕೆ ಹೋಗಿ ಸ್ವಲ್ಪ ದೂರದಲ್ಲಿ ನಿಂತು ಮರೆಯಲ್ಲಿ ನೋಡಲಾಗಿ ಕುಮಟೆ ರಸ್ತೆಯ ಮೇಲೆ ಒಬ್ಬ ವ್ಯಕ್ತಿ 2 ಪ್ಲಾಸ್ಟಿಕ ಬಾಟಲಿಗಳಲ್ಲಿ ಕಳ್ಳ ಬಟ್ಟಿ ಸರಾಯಿಯನ್ನು ಹಿಡಿದುಕೊಂಡು ನಿಂತಿದನ್ನು ನೋಡಿ ಅವನ್ನು ಅಕ್ರಮವಾಗಿ ಸರಾಯಿ ಮಾರಾಟ ಮಾಡುತ್ತಿದ್ದ ಬಗ್ಗೆ ಖಚಿತಪಡಿಸಿಕೊಂಡು ಕೂಡಲೇ ಸಿಬ್ಬಂದಿ ಮತ್ತು ಪಂಚರೊಂದಿಗೆ ಆತನನ್ನು ಹಿಡಿಯಲು ಗೇರವ ಮಾಡಲಾಗಿ ಆತನನ್ನು ಹಿಡಿದು ಹೆಸರು ವಿಚಾರಿಸಲಾಗಿ ರವಿ ಭಗವಂತ ಸಾಳುಂಕೆ ಸಾಃ ಗೋಠೆ ಅಂತಾ ತಿಳಿಸಿದನ್ನು ಆತನ ಬಳ್ಳಿ ಇದ್ದ 2 ಬಾಟಲಿಗಳನ್ನು ತೆಗೆದು ನೋಡಲಾಗಿ ಅದರಿಂದ ಗಾಟ ವಾಸನೆ ಬರುತ್ತಿತ್ತು. ನಂತರ ಪಂಚರ ಸಮಕ್ಷಮ ಸದರಿ ಬಾಟಲಿಗಳಿಂದ 1 ಬಾಟಲಿನಲ್ಲಿ 180 ಎಮ್ ಎಲ್ ನ ಶ್ಯಾಂಪಲ ಪಡೆದು ಅದನ್ನು ಒಂದು ಕವರಿನಲ್ಲಿ ಹಾಕಿ ಅದಕ್ಕೆ ದಾರದಿಂದ ಕಟ್ಟಿ ಇಲಾಖಾ ಮುದ್ರೆ ಹಾಕಿ ಅದಕ್ಕೆ ಪಂಚರ ಸಹಿಯುಳ್ಳ ಚೀಟಿ ಅಂಟಿಸಿದೆವು. ನಂತರ ಪಂಚನಾಮೆಯನ್ನು ಪಂಚರ ಸಮಕ್ಷಮ 07-20 ರಿಂದ 08-20

ವರೆಗೆ ಜರುಗಿಸಿ ಸಹಿಯನ್ನು ಪಡೆದುಕೊಂಡಿರುತ್ತೇವೆ ಸದರಿ ವ್ಯಕ್ತಿಯನ್ನು ರಾತ್ರಿ 07-20 ಗಂಟೆಗೆ ದಸ್ತಗಿರಿ ಮಾಡಿರುತ್ತೇವೆ . ನಂತರ ಆರೋಪಿ ಹಾಗೂ ಮುದ್ದೆಮಾಲನ್ನು ಪಂಚನಾಮೆಯೊಂದಿಗೆ ಠಾಣೆಗೆ ತೆಗೆದುಕೊಂಡು ಬಂದು ಚಾಸಾ-1 ರವರು ಸರ್ಕಾರದ ಪರವಾಗಿ ಪಿರ್ಯಾದಿಯನ್ನು ಸಲ್ಲಿಸಿರುತ್ತಾರೆ .ಈ ಕುರಿತು ನಾನು ಹೇಳಿಕೆಯನ್ನು ನೀಡಿರುತ್ತೇನೆ . ದಾಳಿಯ ದಿನ ನಾವು ದಸ್ತಗಿರಿ ಮಾಡಿದ ಆರೋಪಿ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ ಇರುತ್ತಾನೆ.

ಸಾಕ್ಷಿಯು ಸ್ಯಾಂಪಲ್ ಪಡೆದುಕೊಂಡ ಮುದ್ದೇಮಾಲನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು-ಮಾ-1 ಎಂದು ಗುರುತಿಸಲಾಗಿದೆ .

**ಪಾಟೀ ಸವಾಲುಃ ಶ್ರೀ. ವಿ ಕೆ ಎಲ್ ಆರೋಪಿ ಪರ ವಕೀಲರಿಂದ-**

ಆರೋಪಿಯನ್ನು ನಾನು ಇದೆ ಮೊದಲನೆ ಸಲ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆಂದರೆ ಸರಿಯಲ್ಲ. ಆ ಕಾಲದಲ್ಲಿ ಗೋಠೆ ಗ್ರಾಮದ ಬೀಟ ಗಾರ್ಡ ಆಗಿ ಚಾಸಾ 4 ರವರು ಕರ್ತವ್ಯ ಮಾಡುತ್ತಿದ್ದರು . ಸಾವಳಗಿಯಿಂದ ಗೋಠೆ ಗ್ರಾಮ 14 ಕಿ ಮೀ ಅಂತರದಲ್ಲಿದೆ . ಚಾಸಾ 4 ರವರು ಚಾಸಾ 2 ಮತ್ತು ಚಾಸಾ 3 ರವರನ್ನು ಎಲ್ಲಿಂದ ಬರಮಾಡಿಕೊಂಡು ಬಂದ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿಯು ಆ ದಿನ ರಾತ್ರಿ ಆಗಿದ್ದರಿಂದ ಗೋಠೆ ರಸ್ತೆಯ ಮೇಲೆ ಇರುವ ಕಂಬದ ಲಾಯಿಟಿನ ಬೆಳಕಿನಲ್ಲಿ ಕಾಣಿಸಿರುತ್ತಾನೆ. ಪಂಚನಾಮೆಯನ್ನು ಗುನ್ಹೆ ಸ್ಥಳದಲ್ಲಿ ಜರುಗಿರುಸಿರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯ ಮೇಲೆ ಪಂಚರ ಸಹಿಯನ್ನು ಪಡದುಕೊಂಡಿರುತ್ತೇವೆ . ಸಾಕ್ಷಿ ಮುಂದುವರೆದು ಪಂಚನಾಮೆಯನ್ನು ಲ್ಯಾಪಟಾಪನಲ್ಲಿ ಬೆರಳಚ್ಚು ಮಾಡಿ ಠಾಣೆಗೆ ಬಂದು ಪ್ರೀಟಂರನಲ್ಲಿ ಪ್ರಿಂಟ್ ತೆಗೆದು ಪಂಚರಿಗೆ ಒದಿ ಹೇಳಿ ತದನಂತರ ಪಂಚರ ಸಹಿಯನ್ನು ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಪಂಚರ ಸಮಕ್ಷಮ ಗುನ್ಹೆ ಜಾಗದಲ್ಲಿ ಪಂಚನಾಮೆಯನ್ನು ಜರುಗಿರುಸಿರುವುದಿಲ್ಲ ಎಂದರೆ ಸರಿಯಲ್ಲ. ಮು ಮಾ 1 ಈ ಗುನ್ಹೆ ಸಂಬಂದಪಟ್ಟಿದ್ದು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಅಪರಾಧ ಮಾಡಿದರೂ ಸಹ ಆತನ ವಿರುದ್ದ ಚಾಸಾ-1 ರವರ ಮಾತು ಕೇಳಿ ಖೊಟ್ಟಿ ಸಾಕ್ಷಿ ನುಡಿಯುತ್ತೀನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

sd/-

ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ